**ಸಾಕ್ಷಿಯನ್ನು ದಿನಾಂಕಃ 08-11-2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಮುಖ್ಯ ವಿಚಾರಣೆ:- ಅರ್ಜಿದಾರರ ಪರ ಶ್ರೀ.ಎ ಎಂ ಎಂ ವಕೀಲರಿಂದಃ-**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರಪಡಿಸಿದ್ದು, ಅದರಲ್ಲಿ ಬರೆದ ಸಂಗತಿಗಳನ್ನು ನಾನೇ ಹೇಳಿ ಬರೆಯಿಸಿದ್ದು, ಅದು ನಿಜವಿರುತ್ತವೆ ಮತ್ತು ಅದನ್ನು ಓದಿ ನೋಡಿ ತಿಳಿದುಕೊಂಡು ಸಹಿ ಮಾಡಿದ್ದೇನೆ.

ಅರ್ಜಿದಾರನಿಗೆ ಸಂಬಂಧಪಟ್ಟಂತೆ ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ನಾನೇ ನೀಡಿದ್ದೇನೆ. ಸದರಿ ಅಂಗನ್ಯೂನತಾ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀಮತಿ ಎಸ್ ಎ ಎನ್ ವಕೀಲರಿಂದಃ-**

ಅರ್ಜಿದಾರನಿಗೆ ಎಡಮೊಣಕಾಲಿಗೆಯಾಗಲೀ ಎಡಹಿಮ್ಮಡಿಗಾಗಲೀ ಗಾಯಗಳು ಆಗಿಲ್ಲ ಎಂದರೆ ಸರಿ. ನಾನು ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಲ್ಲ, ಕೇವಲ ಔಷಧೋಪಚಾರ ಮಾಡಿದ್ದೇನೆ ಅನ್ನುವುದು ಸರಿಯಲ್ಲ. ಅರ್ಜಿದಾರನಿಗೆ ಶಸ್ತ್ರ ಚಿಕಿತ್ಸೆ ಮಾಡಿ ನೇಲ್ಸನ್ನು ಅಳವಡಿಸಿದ್ದೇನೆ. ಅರ್ಜಿದಾರನಿಗೆ ಕುಳಿತುಕೊಂಡು ಕೆಲಸ ಮಾಡಲು ಯಾವುದೇ ತೊಂದರೆ ಇಲ್ಲ ಅನ್ನುವುದು ಸರಿಯಲ್ಲ. ಅರ್ಜಿದಾರನು ಕಡಿಮೆ ವಯಸ್ಕನಾಗಿದ್ದರಿಂದ ಅವರಿಗೆ ಆದಂತಹ ಗಾಯಗಳು ಕ್ರಮೇಣವಾಗಿ ಸರಿ ಹೊಂದುವ ಸಾಧ್ಯತೆ ಇದೆ ಎಂದರೆ ಸಾಕ್ಷಿ ಹೇಳಲು ಕಷ್ಟ ಎಂದು ಹೇಳುತ್ತಾರೆ. ಒಬ್ಬ ವ್ಯಕ್ತಿ ಸಾಮಾನ್ಯವಾಗಿ ಓಡಾಡಲು 20 ರಿಂದ 50 ಡಿಗ್ರಿಯಷ್ಟು ಚಲನವಲನ ಇರಬೇಕಾಗುತ್ತದೆ. ಅರ್ಜಿದಾರನಿಗೆ ಶೇಕಡಾ 20 ರಷ್ಟು ಕುಂಟಿತವಾಗಿದೆ ಎಂದು ನಮೂದಿಸಿದ್ದು, ಅದರಿಂದ ಓಡಾಡಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಓಡಾಡಲು ಅಸಾಧ್ಯವೇನಿಲ್ಲ ಎಂದರೆ ಸರಿ. ಅರ್ಜಿದಾರನ ಮಸಲ್ಸ ಸ್ಟ್ರೆಂತ್ ಗ್ರೇಡ್ 4 ಇರುತ್ತದೆ. ಆ ರೀತಿ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ ಅಥವಾ ನಿಪಿ-10 ರಲ್ಲಾಗಲೀ ನಮೂದಿಸಿಲ್ಲ ಎಂದರೆ ಸರಿ. ಅರ್ಜಿದಾರನ ಮಸಲ್ಸ ಸ್ಟ್ರೆಂತ್ ಗ್ರೇಡ್ 5 ಇರುವುದರಿಂದ, ನಾನು ನಮೂದಿಸಿಲ್ಲ ಅನ್ನುವುದು ಸರಿಯಲ್ಲ. ಸಾಮಾನ್ಯವಾಗಿ ಮಸಲ್ಸ ಸ್ಟ್ರೆಂತ್ ಗ್ರೇಡ್ 4 ಇದ್ದರೆ ಸಾಮಾನ್ಯಕ್ಕೆ ಹತ್ತಿರ ಇರುತ್ತದೆ ಎಂದರೆ ಸರಿ. ಅರ್ಜಿದಾರನಿಗೆ ದುಡಿಮೆಯ ಶಕ್ತಿ ಎಷ್ಟು ಕಡಿಮೆಯಾಗಿದೆ ಎಂದು ಹೇಳಲು ಬರುವುದಿಲ್ಲ. ಅರ್ಜಿದಾರನ ದುಡಿಮೆಯ ಶಕ್ತಿಗೆ ಗಾಯಗಳು ಭಾದಿತವಾಗಿಲ್ಲ, ಆದ್ದರಿಂದ ನಾನು

ನಮೂದಿಸಿಲ್ಲ ಅನ್ನುವುದು ಸರಿಯಲ್ಲ. ಅರ್ಜಿದಾರನಿಗೆ ಅನುಕೂಲ ಮಾಡಿಕೊಡಲು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ 1 ಮತ್ತು 3ನೇ ಎದುರುದಾರರ ಪರ ವಕೀಲರು ಗೈರು ಹಾಜರು ಇದ್ದು, ಪಾಟೀಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

<u>ಮರುವಿಚಾರಣೆಃ- ಏನೂ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

Sd/-
ಸದಸ್ಯರು ಮೋ.ವಾ.ಅ. ಮಂಡಳಿ-5,
ಜಮಖಂಡಿ.